ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:94:ದೂರು:2018-19:ತವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:08.10.2018.

# <u>ಸುತ್ತೋಲೆ</u>

**ವಿಷಯ:** ಇಲಾಖೆಯ ಕಾಲೇಜು/ಕಛೇರಿಗಳಲ್ಲಿನ ಗೌಪ್ಯ ಮಾಹಿತಿ/ದಾಖಲೆಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.

*****

ಈ ಇಲಾಖಾ ವ್ಯಾಪ್ತಿಯ ಕಛೇರಿ/ಕಾಲೇಜಿನ ಕಡತಗಳಲ್ಲಿನ ಆದೇಶಗಳು/ಟಿಪ್ಪಣಿ ಹಾಳೆಗಳು/ ಪತ್ರಗಳು/ ಗೌಪ್ಯ ಮಾಹಿತಿಗಳು/ಅಧಿಕಾರಿಗಳ ಪ್ರವಾಸ ಕಾರ್ಯಕ್ರಮದ ಮಾಹಿತಿಗಳು ಹಾಗೂ ಇತರ ದಾಖಲೆಗಳು ಇಲಾಖೆಯ ಗಮನಕ್ಕೆ ಬಾರದೇ ಸಾಮಾಜಿಕ ಜಾಲತಾಣಗಳಾದ ಹಲವು ವಾಟ್ಸ್ ಅಪ್/ ಫೇಸ್‌ಬುಕ್ ಗ್ರೂಪ್‌ಗಳಲ್ಲಿ ಪ್ರಕಟವಾಗುತ್ತಿರುವುದರ ಬಗ್ಗೆ ಹಲವು ದೂರುಗಳು ಈ ಕಛೇರಿಯಲ್ಲಿ ಸ್ವೀಕೃತವಾಗುತ್ತಿದ್ದು ಇದನ್ನು ಗಂಭೀರವಾಗಿ ಪರಗಣಿಸಲಾಗಿದೆ. ಇನ್ನು ಮುಂದೆ ಕಛೇರಿಯ/ಕಾಲೇಜಿನ ಕಡತಗಳಲ್ಲಿನ ಆದೇಶಗಳು/ಟಿಪ್ಪಣಿ ಹಾಳೆಗಳು/ ಪತ್ರಗಳು/ ಗೌಪ್ಯ ಮಾಹಿತಿಗಳು/ಅಧಿಕಾರಿಗಳ ಪ್ರವಾಸ ಕಾರ್ಯಕ್ರಮದ ಮಾಹಿತಿಗಳು ಹಾಗೂ ಇತರ ದಾಖಲೆಗಳು ಸಾಮಾಜಿಕ ಜಾಲತಾಣಗಳಲ್ಲಿ ಅನಧಿಕೃತವಾಗಿ ಬಹಿರಂಗಪಡಿಸಿದಲ್ಲಿ ಅದನ್ನು ಪರಿಚಲಿಸಿದವರು/ಅಪ್‌ಲೋಡ್ ಮಾಡಿದವರ ವಿರುದ್ಧ ಹಾಗೂ ವಾಟ್ಸ್ ಅಪ್‌ನ ಗ್ರೂಪ್ ಅಡ್ಮಿನ್ ಮೇಲೆ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ,**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ (ತಮ್ಮ ಕಛೇರಿ ವ್ಯಾಪ್ತಿಯ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಗಮನಕ್ಕೆ ತರಲು ಸೂಚಿಸಲಾಗಿದೆ.
2. ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಮಾಹಿತಿಗಾಗಿ
3. ಇಲಾಖಾ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಅನುದಾನಿತ ಕಾಲೇಜುಗಳ ಪ್ರಾಂಶುಪಾಲರು/ಸಿಬ್ಬಂದಿ ವರ್ಗದವರ ಮಾಹಿತಿಗಾಗಿ
4. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ-ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

**<u>ಪ್ರತಿ:-ಮಾಹಿತಿಗಾಗಿ</u>**

1. ಮಾನ್ಯ ಆಯುಕ್ತರು/ನಿರ್ದೇಶಕರು/ಹೆಚ್ಚುವರಿ ನಿರ್ದೇಶಕರು/ಮುಖ್ಯ ಆಡಳಿತಾಧಿಕಾರಿಗಳ ಆಪ್ತ ಶಾಖೆಗಳ ಮಾಹಿತಿಗಾಗಿ
2. ಕಛೇರಿ ಪ್ರತಿ.